ನಗರದ 2–3 ಕಡೆ ಕಳ್ಳತನ ಶಂಕೆ • ಬ್ಯಾಟರಾಯನಪುರ ಪೊಲೀಸರ ಕಾರ್ಯಾಚರಣೆ

ಅಲಾರಾಂನಿಂದ ಸಿಕ್ಕಿಬಿದ್ದ ಎಟಿಎಂ ಕಳ್ಳರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎರಡು ಮೂರು ಕಡೆಗಳಲ್ಲಿ ಎಟಿಎಂ ಯಂತ್ರಗಳನ್ನು ಕತ್ತರಿಸಿ ಲಕ್ಷಾಂತರ ರೂಪಾಯಿ ಕದ್ದುಕೊಂಡು ಪರಾರಿಯಾಗಿದ್ದ ಕಳ್ಳರಿಬ್ಬರು, ಭಾನುವಾರ ರಾತ್ರಿ ಮತ್ತೊಂದು ಎಟಿಎಂ ಘಟಕದಲ್ಲಿ ಕಳ್ಳತನ ಎಸಗಲು ಯತ್ನಿಸಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿರುವ ಎಸ್‌ಬಿಐ ಶಾಖೆಯ ಎಟಿಎಂ ಘಟಕಕ್ಕೆ ನುಗ್ಗಿದ್ದ ಆರೋಪಿಗಳು, ಯಂತ್ರವನ್ನು ಗ್ಯಾಸ್ ಕಟರ್‌ನಿಂದ ಕತ್ತರಿಸಿ ಹಣವನ್ನೆಲ್ಲ ಬ್ಯಾಗ್‌ನಲ್ಲಿ ತುಂಬಿಕೊಂಡು ಪರಾರಿಯಾಗಲು ಸಜ್ಜಾಗಿದ್ದರು. ಅದೇ ವೇಳೆ ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪಂಜಾಬ್‌ನ ಹರ್ಷ ಆರೋ ಹಾಗೂ ಸುರಬ್ಜಿತ್ ಬಂಧಿತರು. ಅವರಿಬ್ಬರೂ ನಗರದ ಎರಡು ಮೂರು ಕಡೆ ಕೃತ್ಯ ಎಸಗಿರುವ ಮಾಹಿತಿ ಲಭ್ಯವಾಗಿದೆ. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಿದ್ದೇವೆ' ಎಂದು ತಿಳಿಸಿದರು.

ಅಲಾರಾಂ ನೀಡಿದ್ದ ಸುಳಿವು: 'ಹರಿಯಾಣ ನೋಂದಣಿ ಸಂಖ್ಯೆಯ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಅದನ್ನು ದೂರದಲ್ಲೇ ನಿಲ್ಲಿಸಿ ಎಟಿಎಂ ಘಟಕಕ್ಕೆ ಬಂದಿದ್ದರು. ಹೆಲ್ಮೆಟ್ ಧರಿಸಿಕೊಂಡು ರಾಡ್, ಗ್ಯಾಸ್ ಕಟರ್ ಹಾಗೂ ಸ್ಕ್ರೂಡ್ರೈವರ್ ಸಮೇತ ಘಟಕದೊಳಗೆ ನುಗ್ಗಿದ್ದರು' ಎಂದು ಅಧಿಕಾರಿ ಹೇಳಿದರು.

'ಸಿ.ಸಿ.ಟಿ.ವಿ. ಕ್ಯಾಮೆರಾಗೆ ಚೂಯಿಂಗ್ ಗಮ್ ಅಂಟಿಸಿದ್ದರು. ಎಟಿಎಂ ಯಂತ್ರವನ್ನು ರಾಡ್‌ನಿಂದ ಹೊಡೆದು ಹಾಗೂ ಗ್ಯಾಸ್ ಕಟರ್‌ನಿಂದ ಕತ್ತರಿಸಿದ್ದರು. ಘಟಕಕ್ಕೆ ಅಳವಡಿಸಿದ್ದ ತಂತಿ ನಿಷ್ಕ್ರಿಯಗೊಳ್ಳುತ್ತಿದ್ದಂತೆ ಎಸ್‌ಬಿಐನ ಮುಂಬೈ ಪ್ರಧಾನ ಕಚೇರಿಯಲ್ಲಿ ಅಲಾರಾಂ ಹೊಡೆದು ಕೊಳ್ಳಲಾರಂಭಿಸಿತ್ತು. ಅಲ್ಲಿಯ ಅಧಿಕಾರಿಗಳು ಸ್ಥಳೀಯ ಬ್ಯಾಂಕ್ ಅಧಿಕಾರಿಗೆ ಮಾಹಿತಿ ನೀಡಿದ್ದರು. ಅವರೇ ಪೊಲೀಸ್ ನಿಯಂತ್ರಣ ಕಚೇರಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು.'

'ಗಸ್ತಿನಲ್ಲಿದ್ದ ಹೊಯ್ಸಳ ವಾಹನ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಆರೋಪಿಗಳು ಘಟಕದೊಳಗೆ ಇರುವುದು ಕಂಡಿತ್ತು. ಕೂಡಲೇ ಶಟರ್ ಬಾಗಿಲನ್ನು ಹೊರಗಿನಿಂದ ಬಂದ್ ಮಾಡಿದ್ದರು. ಹೆಚ್ಚುವರಿ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಆರೋಪಿಗಳನ್ನು ಸೆರೆಹಿಡಿದರು' ಎಂದು ಅಧಿಕಾರಿ ವಿವರಿಸಿದರು.

ಪೊಲೀಸರ ಮೇಲೆ ರಾಡ್ ಬೀಸಿದರು: 'ಶಟರ್ ತೆರೆಯುತ್ತಿದ್ದಂತೆ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಆರೋಪಿಗಳು ಪೊಲೀಸರ ಮೇಲೆಯೇ ರಾಡ್ ಬೀಸಿದರು. ಇಬ್ಬರು ಸಿಬ್ಬಂದಿಗೆ ಗಾಯವಾಯಿತು. ಉಳಿದೆಲ್ಲ ಸಿಬ್ಬಂದಿ ಆರೋಪಿಗಳನ್ನು ಸುತ್ತುವರಿದು ಹಿಡಿದರು' ಎಂದು ಅಧಿಕಾರಿ ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಸುರಬ್ಜಿತ್

ಹರ್ಷಾ

ಆರೋಪಿಗಳು ಕತ್ತರಿಸಿದ್ದ ಎಟಿಎಂ ಯಂತ್ರ

ಬಿಟಿಎಂ ಲೇಔಟ್‌ನಲ್ಲಿ ಬಾಡಿಗೆ ಮನೆ

'ಕಳೆದ ತಿಂಗಳು ನಗರಕ್ಕೆ ಬಂದಿರುವ ಆರೋಪಿಗಳು, ಬಿಟಿಎಂ ಲೇಔಟ್‌ನ ಮನೆಯೊಂದರಲ್ಲಿ ಬಾಡಿಗೆಗೆ ಇದ್ದರು. ನಗರದಲ್ಲಿ ಓಡಾಡಿ, ಸೆಕ್ಯುರಿಟಿ ಸಿಬ್ಬಂದಿ ಇಲ್ಲದ ಎಟಿಎಂ ಘಟಕಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಘಟಕಕ್ಕೆ ನುಗ್ಗಿ ಕೃತ್ಯ ಎಸಗಿ ಪರಾರಿಯಾಗುತ್ತಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಎಟಿಎಂ ಘಟಕಗಳನ್ನು ಕತ್ತರಿಸುವಲ್ಲಿ ಆರೋಪಿಗಳು ಪರಿಣತಿ ಹೊಂದಿದ್ದಾರೆ. ಅದೇ ಕಾರಣಕ್ಕೆ ಮೇಲಿಂದ ಮೇಲೆ ಕೃತ್ಯ ಎಸಗುತ್ತಿದ್ದರು. ಹೈದರಾಬಾದ್‌ನಲ್ಲೂ ಆರೋಪಿಗಳು ಎಟಿಎಂ ಕಳ್ಳತನ ಮಾಡಿರುವ ಮಾಹಿತಿ ಇದೆ' ಎಂದರು.

ಕೆನರಾ ಬ್ಯಾಂಕ್ ಎಟಿಎಂನಲ್ಲಿ ₹23.55 ಲಕ್ಷ ಕಳವು

ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯ ನಾಗನಾಥಪುರ ಹೊಸ ರಸ್ತೆಯಲ್ಲಿರುವ ಕೆನರಾ ಬ್ಯಾಂಕ್‌ನ ಎಟಿಎಂ ಘಟಕವೊಂದರಲ್ಲಿ ಡಿ. 28ರ ತಡರಾತ್ರಿ ₹ 23.55 ಲಕ್ಷ ಕಳವಾಗಿತ್ತು. ಯಂತ್ರವನ್ನು ಗ್ಯಾಸ್ ಕಟರ್‌ನಿಂದ ಕತ್ತರಿಸಿ ಆರೋಪಿಗಳು ಕೃತ್ಯ ಎಸಗಿದ್ದರು. ಈ ಪ್ರಕರಣದಲ್ಲೂ ಹರ್ಷ ಹಾಗೂ ಸುರಬ್ಜಿತ್ ಭಾಗಿಯಾಗಿರುವ ಅನುಮಾನ ಪೊಲೀಸರಿಗೆ ಇದೆ.

ಬಡ್ಡಿ ವ್ಯವಹಾರ: ಗೋಲ್ಡ್ ನಾರಾಯಣ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು-ಬಾಹಿರವಾಗಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಎಂ.ನಾರಾಯಣ ಅಲಿಯಾಸ್ ಗೋಲ್ಡ್ ನಾರಾಯಣ (47) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಾಗರಬಾವಿ 2ನೇ ಹಂತದ ನಿವಾಸಿ ನಾರಾಯಣ ಹಲವು ವರ್ಷಗಳಿಂದ ಜನರಿಗೆ ಸಾಲ ಕೊಟ್ಟು ಬಡ್ಡಿ ವ್ಯವಹಾರ ನಡೆಸುತ್ತಿದ್ದ. ಬಡ್ಡಿ ಪಾವತಿ ಮಾಡದವರಿಗೆ ಜೀವ ಬೆದರಿಕೆಯೊಡ್ಡುತ್ತಿದ್ದ. ಆತನ ವಿರುದ್ಧ ಅನ್ನಪೂರ್ಣೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮನೆ ಮೇಲೆ ದಾಳಿ ನಡೆಸಿ ಆತನನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ದೂರುದಾರ ಅನಂತ ನಾರಾಯಣ ಎಂಬುವರು ಸ್ನೇಹಿತನ ಮೂಲಕ ಪರಿಚಯವಾದ ನಾರಾಯಣನಿಂದ 2017ರಲ್ಲಿ ₹ 55 ಲಕ್ಷ ಸಾಲ ಪಡೆದಿದ್ದರು. ಶೇ 5ರಷ್ಟು ಬಡ್ಡಿಯಂತೆ ಪ್ರತಿ ತಿಂಗಳು ₹ 2.50 ಲಕ್ಷ ಪಾವತಿಸಿ ಒಟ್ಟು ₹ 55 ಲಕ್ಷ ವಾಪಸು ಕಟ್ಟಿದ್ದರು. ಅನಾರೋಗ್ಯದಿಂದಾಗಿ 6 ತಿಂಗಳು ಬಡ್ಡಿ ಕಟ್ಟಲು ಸಾಧ್ಯವಾಗಿರಲಿಲ್ಲ. ಅಷ್ಟಕ್ಕೆ ನಾರಾಯಣ, ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದರು. ಬೇಸತ್ತ ಅನಂತ ನಾರಾಯಣ ಅನ್ನಪೂರ್ಣೇಶ್ವರಿನಗರ ಠಾಣೆಗೆ ದೂರು ನೀಡಿದ್ದರು' ಎಂದು ಅಧಿಕಾರಿ ವಿವರಿಸಿದರು.

'ಬಡ್ಡಿಗೆ ಹಣ ನೀಡುವಾಗ ಆರೋಪಿ ನಿವೇಶನ ಪತ್ರ ಹಾಗೂ ಖಾಲಿ ಚೆಕ್ ಪಡೆಯುತ್ತಿದ್ದ. ಆತನ ಮನೆ ಮೇಲೆ ದಾಳಿ ನಡೆಸಿದ್ದಾಗ ನಿವೇಶನ ಪತ್ರಗಳು, ಖಾಲಿ ಚೆಕ್‌ಗಳು ಹಾಗೂ ಲೆಕ್ಕ ಪುಸ್ತಕಗಳು ಸಿಕ್ಕಿವೆ' ಎಂದು ಹೇಳಿದರು.

ಅಲಕ್ಷ್ಯಕ್ಕೆ ಆಕ್ರೋಶ 'ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆರೋಪಿಸಿ ವಿವಿಧ ಸಂಘಟನೆ ಸದಸ್ಯರು ನಗರದ ಪುರಭವನ ಎದುರು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಆದಿಚುಂಚನಗಿರಿ ಮಠದ ಶಾಖೆಯ ನೌಕರ ಸಾವು

ನವದೆಹಲಿ: ಇಲ್ಲಿನ ಗ್ರೇಟರ್ ನೋಯ್ಡಾದ ಬಿಸ್ರಾಕ್ ಬಳಿ ಇರುವ ಕರ್ನಾಟಕ ಮೂಲದ ಆದಿಚುಂಚನಗಿರಿ ಮಠದ ಶಾಖೆಯಲ್ಲಿ ನೌಕರರೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಜ.21ರಂದು ಲೆಕ್ಕಪತ್ರಗಳ ವಿಭಾಗದಲ್ಲಿ ಕ್ಲರ್ಕ್ ಆಗಿ ಕೆಲಸಕ್ಕೆ ಸೇರಿದ್ದ ಗುರುರಾಜ್ (24) ಮೃತ ವ್ಯಕ್ತಿ. ಭಾನುವಾರ ಬೆಳಿಗ್ಗೆ ಕೊಠಡಿಯಲ್ಲಿ ಗುರುರಾಜ್ ಶವವನ್ನು ಕಂಡ ಇನ್ನೊಬ್ಬ ಸಿಬ್ಬಂದಿ ಮಠದ ದೆಹಲಿ ಶಾಖೆಯ ಉಸ್ತುವಾರಿ ಆನಂದನಾಥ ಸ್ವಾಮೀಜಿಗೆ ವಿಷಯ ತಿಳಿಸಿದ್ದಾರೆ. ಶವದ ಬಳಿ ರಕ್ತಸಿಕ್ತ ಇಟ್ಟಿಗೆ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೈಲುಗಳಲ್ಲಿ ಕೈದಿಗಳ ಅಸಹಜ ಸಾವು ಪ್ರಕರಣ: ಹೈಕೋರ್ಟ್ ವಿಚಾರಣೆ

ಜಿಲ್ಲಾಧಿಕಾರಿಗೆ ಪರಿಹಾರದ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈಲುಗಳಲ್ಲಿನ ಕೈದಿಗಳ ಅಸಹಜ ಸಾವು ಪ್ರಕರಣಗಳಲ್ಲಿ, ಮೃತರ ಕುಟುಂಬದವರಿಗೆ ಮಧ್ಯಂತರ ಪರಿಹಾರ ನೀಡಲು ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳನ್ನು ಸಕ್ಷಮ ಪ್ರಾಧಿಕಾರದ ಮುಖ್ಯಸ್ಥರನ್ನಾಗಿ ನೇಮಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಹೈಕೋರ್ಟ್, ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ಜೈಲುಗಳಲ್ಲಿನ ಅಸಹಜ ಸಾವುಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿನ ಜೈಲುಗಳ ಅಧೀಕ್ಷಕರಿಂದ ವಿವರಗಳನ್ನು ಪಡೆಯಬೇಕು. ಮೃತರ ಕುಟುಂಬದವರಿಗೆ ಪರಿಹಾರ ನೀಡುವ ಕಾರ್ಯಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ನೆರವು ಪಡೆದುಕೊಳ್ಳಬೇಕು. ಮೃತ ಕುಟುಂಬದವರು ಪರಿಹಾರಕ್ಕೆ ಅರ್ಜಿ ಸಲ್ಲಿಸಿದ ಬಳಿಕ ಜಿಲ್ಲಾಧಿಕಾರಿಗಳು ಪೊಲೀಸರ ನೆರವು ಪಡೆದು ಅಗತ್ಯ ತನಿಖೆ ನಡೆಸಬೇಕು' ಎಂದು ಸೂಚಿಸಿದೆ.

'ಮಧ್ಯಂತರ ಪರಿಹಾರ ಕೋರಿರುವ ಅರ್ಜಿಗಳ ವಿವರಗಳನ್ನು ಸ್ಥಳೀಯ ಭಾಷೆಗಳಲ್ಲಿ ಅಧಿಕ ಪ್ರಸಾರ ಹೊಂದಿದ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಣೆ ನೀಡಬೇಕು. ಅರ್ಜಿ ಸಲ್ಲಿಸುವ ಮೃತ ಕುಟುಂಬದವರ ಸಾಚಾತನದ ಖಚಿತತೆಗೆ ಸ್ಥಳೀಯ ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್‌ಗಳ ನೆರವು ಪಡೆದುಕೊಳ್ಳಬಹುದು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

'ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿಗಳು ಬಾಂಡ್‌ಗಳನ್ನು ಪಡೆದು ಪರಿಹಾರ ಬಿಡುಗಡೆ ಮಾಡಬೇಕು. ಈ ಕುರಿತ ಅನುಪಾಲನಾ ವರದಿಯನ್ನು ಒಂದು ತಿಂಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 16ಕ್ಕೆ ಮುಂದೂಡಿದೆ.

ಹೋಟೆಲ್‌ನಲ್ಲಿ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಲಿತ್ ಅಶೋಕ ಹೋಟೆಲ್‌ನಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ಔತಣಕೂಟದ ವೇಳೆ ಸಂಕಲ್ಪ (19) ಎಂಬುವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೆ.ಪಿ.ನಗರದ ಸಂಕಲ್ಪ ಹಾಗೂ ಆತನ ಸ್ನೇಹಿತರು ಔತಣಕೂಟಕ್ಕೆ ಹೋಗಿದ್ದ ವೇಳೆ ಈ ಘಟನೆ ನಡೆದಿದೆ. ಸಂಕಲ್ಪ ಅವರ ಸ್ನೇಹಿತ ಭಾರ್ಗವ್ ನೀಡಿರುವ ದೂರು ಆಧರಿಸಿ ಹೋಟೆಲ್ ವ್ಯವಸ್ಥಾಪಕ, ಕಾರ್ಯಕ್ರಮ ಸಂಯೋಜಕ, ಭದ್ರತಾ ವ್ಯವಸ್ಥಾಪಕ ಸೇರಿ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಔತಣಕೂಟದಲ್ಲಿ ಕೆಲ ವ್ಯಕ್ತಿಗಳು ವಿನಾಕಾರಣ ಜಗಳ ತೆಗೆದರು. ಸ್ಥಳದಲ್ಲಿದ್ದ ಬೌನ್ಸರ್‌ಗಳಿಗೆ ದೂರು ನೀಡಿದೆವು. ಅವರು ನಮ್ಮನ್ನೇ ಹೊರಗೆ ದಬ್ಬಿದರು. ತಡರಾತ್ರಿ ಹೋಟೆಲ್‌ನ ಮುಂಭಾಗದಲ್ಲಿ ನಿಂತಿದ್ದೆವು. ಅಲ್ಲಿಗೆ ಬಂದ ವ್ಯಕ್ತಿ ಚಾಕುವಿನಿಂದ ಸಂಕಲ್ಪ ಅವರಿಗೆ ಇರಿದಿದ್ದ. ಹೋಟೆಲ್‌ನ ಸೆಕ್ಯುರಿಟಿ ಸಿಬ್ಬಂದಿ ಸಹಾಯಕ್ಕೆ ಬರಲಿಲ್ಲ. ಗಾಯಗೊಂಡಿದ್ದ ಸಂಕಲ್ಪ ಅವರನ್ನು ನಾವೇ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದೆವು' ಎಂದು ಭಾರ್ಗವ್ ದೂರಿನಲ್ಲಿ ತಿಳಿಸಿದ್ದಾರೆ.

'ಔತಣಕೂಟ ನಡೆಸಲು ಹೋಟೆಲ್‌ನವರು ಯಾವುದೇ ಅನುಮತಿ ಪಡೆದಿಲ್ಲ. ಚಾಕು ಇದ್ದವರನ್ನೂ ಒಳಗೆ ಬಿಟ್ಟು ನಿರ್ಲಕ್ಷ್ಯ ವಹಿಸಿದ್ದಾರೆ' ಎಂದೂ ಉಲ್ಲೇಖಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

₹112 ಕೋಟಿ ಬಿಡುಗಡೆ

ಬೆಂಗಳೂರು: ಅತಿವೃಷ್ಟಿ ಹಾಗೂ ಪ್ರವಾಹಪೀಡಿತ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ 14 ಜಿಲ್ಲೆಗಳಿಗೆ ₹112 ಕೋಟಿಯನ್ನು ಸರ್ಕಾರ ಸೋಮವಾರ ಬಿಡುಗಡೆ ಮಾಡಿದೆ.

ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಗಳಲ್ಲಿ ಹಣ ಕಡಿಮೆ ಇರುವ ಜಿಲ್ಲೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಗೆ ಅತಿ ಹೆಚ್ಚು ₹15 ಕೋಟಿ, ದಾವಣಗೆರೆಗೆ ₹14 ಕೋಟಿ, ಚಿತ್ರದುರ್ಗಕ್ಕೆ ₹13 ಕೋಟಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗೆ ತಲಾ ₹10 ಕೋಟಿ, ಬೀದರ್, ಚಾಮರಾಜನಗರ, ಕೊಪ್ಪಳ, ರಾಮನಗರ, ವಿಜಯಪುರ, ರಾಯಚೂರು, ತುಮಕೂರು, ಯಾದಗಿರಿ ಜಿಲ್ಲೆಗೆ ತಲಾ ₹5 ಕೋಟಿ ನೀಡಲಾಗಿದೆ.

ಗೂಂಡಾ ಕಾಯ್ದೆಯಡಿ ರೌಡಿ ಸುಕಿ ಬಂಧನ

ಬೆಂಗಳೂರು: ಕೊಲೆ ಯತ್ನ, ಸುಲಿಗೆ ಹಾಗೂ ಜೀವ ಬೆದರಿಕೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ರೌಡಿ ಸುಕಿ ಅಲಿಯಾಸ್ ಸುಕೇಶ (25) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಕುಮಾರಸ್ವಾಮಿ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

'ಯಲಚೇನಹಳ್ಳಿಯ ಕಾಶಿನಗರ ವೃತ್ತದ ನಿವಾಸಿ ಸುಕೇಶ, 2012ರಿಂದಲೇ ಅಪರಾಧ ಕೃತ್ಯಗಳನ್ನು ಎಸಗಲಾರಂಭಿಸಿದ್ದ. ಆತನ ವಿರುದ್ಧ ರೌಡಿಪಟ್ಟಿ ಸಹ ಇತ್ತು' ಎಂದು ಪೊಲೀಸರು ಹೇಳಿದರು.

'ಕೆಲ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದ ಆರೋಪಿ ಜಾಮೀನು ಮೇಲೆ ಹೊರ ಬಂದಿದ್ದ. ಅದಾದ ಬಳಿಕವೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ. ಸಾರ್ವಜನಿಕರಿಗೆ ಜೀವ ಬೆದರಿಕೆ ಹಾಕುತ್ತಿದ್ದ' ಎಂದರು.

ಮನೆಗೆ ನುಗ್ಗಿ ಸುಲಿಗೆ ಯುವಕ ಬಂಧನ

ಬೆಂಗಳೂರು: ಮನೆಗೆ ನುಗ್ಗಿ ಮಹಿಳೆಯರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಆರೋಪದಡಿ ಕಿರಣ್ (22) ಎಂಬಾತನನ್ನು ಬನಶಂಕರಿ ಪೊಲೀಸರು ಬಂಧಿಸಿದ್ದಾರೆ.

'ಮಳವಳ್ಳಿ ತಾಲ್ಲೂಕಿನ ಹಾಡ್ಲ ಹೋಬಳಿಯ ಕಿರಣ್, ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣನಾಗಿದ್ದ. ನಗರಕ್ಕೆ ಬಂದು ಡೆಲಿವರಿ ಬಾಯ್ ಆಗಿ ಕೆಲಸಕ್ಕೆ ಸೇರಿದ್ದ. ಕನಕಪುರ ಮುಖ್ಯರಸ್ತೆಯ ಕೊಠಡಿಯಲ್ಲಿ ಬಾಡಿಗೆಗೆ ಇದ್ದ' ಎಂದು ಪೊಲೀಸರು ಹೇಳಿದರು.

'ಬನಶಂಕರಿ 2ನೇ ಹಂತದ ನಿವಾಸಿ ಕೃಷ್ಣಮೂರ್ತಿ ಎಂಬುವರ ತಾಯಿ ರಮಾಮಣಿ (75) ಅವರು ಜ. 14ರಂದು ಮಧ್ಯಾಹ್ನ 1.45ರ ಸುಮಾರಿಗೆ ಮನೆಯಲ್ಲಿ ಒಬ್ಬರೇ ಇದ್ದರು. ಮನೆಯೊಳಗೆ ನುಗ್ಗಿದ್ದ ಆರೋಪಿ ಚಾಕು ತೋರಿಸಿ ಬೆದರಿಸಿದ್ದ. ಚಿನ್ನಾಭರಣ ಸುಲಿಗೆ ಮಾಡಿ ಪರಾರಿಯಾಗಿದ್ದ. 'ಹಣ ಸಂಪಾದನೆಗಾಗಿ ಆರೋಪಿ ಸುಲಿಗೆ ಮಾಡಲಾರಂಭಿಸಿದ್ದ' ಎಂದು ಹೇಳಿದರು.

'ಆರೋಪಿಯಿಂದ ₹ 1.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ. ಕ್ಲೋರೋಫಾರ್ಮ್ ಬಾಟಲಿ ಹಾಗೂ ಸ್ಟನ್ ಗನ್ ಸಹ ಆರೋಪಿ ಬಳಿ ಸಿಕ್ಕಿದೆ' ಎಂದು ಪೊಲೀಸರು ಹೇಳಿದರು.

ದೇವಸ್ಥಾನದಲ್ಲಿ ಕಳವು

ಬೆಂಗಳೂರು: ಸ್ಯಾಟಲೈಟ್ ಬಸ್ ನಿಲ್ದಾಣ ಸಮೀಪವಿರುವ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕಳ್ಳತನ ನಡೆದಿದ್ದು, ಈ ಸಂಬಂಧ ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜ. 14ರಂದು ರಾತ್ರಿ ನಡೆದಿದೆ ಎನ್ನಲಾದ ಕಳ್ಳತನ ಸಂಬಂಧ ದೇವಸ್ಥಾನದ ಧರ್ಮದರ್ಶಿ ಬಿ.ವಿ. ಮಂಜುನಾಥ್ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ದೇವಸ್ಥಾನದ ಗೋಡೆ ಹಾರಿ ದೇವಸ್ಥಾನದೊಳಗೆ ನುಗ್ಗಿರುವ ಕಳ್ಳರು, ಬೀರುವಿನಲ್ಲಿದ್ದ ₹ 48 ಸಾವಿರ ಕದ್ದುಕೊಂಡು ಹೋಗಿದ್ದಾರೆ. ವ್ಯವಸ್ಥಾಪಕರು 15ರಂದು ಬೆಳಿಗ್ಗೆ ದೇವಸ್